ಸದನದಲ್ಲಿ ಉತ್ತರಿಸುವ
ಪ್ರಶ್ನೆಗಳ ಪಟ್ಟಿ

ಒಟ್ಟು ಪ್ರಶ್ನೆಗಳು – ೧೫

**ಪಟ್ಟಿ – ೦೪**

# ಕರ್ನಾಟಕ ವಿಧಾನ ಪರಿಷತ್ತು

**ನೂರ ಮೂವತ್ತೈದನೆಯ ಅಧಿವೇಶನ**

**ಗುರುವಾರ, ದಿನಾಂಕ: ೧೨ನೇ ಜುಲೈ ೨೦೧೮**

---

**ಸಮೂಹ – IV**

೧. ಮುಖ್ಯಮಂತ್ರಿಗಳು

೨. ಉನ್ನತ ಶಿಕ್ಷಣ ಸಚಿವರು

೩. ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

---

## ಖಾಸಗಿ ವಿಶ್ವವಿದ್ಯಾನಿಲಯಗಳಲ್ಲಿ ಶಿಕ್ಷಣದ ಗುಣಮಟ್ಟದ ಬಗ್ಗೆ

**ಶ್ರೀ ಎನ್. ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೪೬. (೩೩೧) ಉನ್ನತ ಶಿಕ್ಷಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ ಖಾಸಗಿ ವಿಶ್ವವಿದ್ಯಾನಿಲಯಗಳಲ್ಲಿ ವಿದ್ಯಾರ್ಥಿಗಳ ಪ್ರವೇಶ (ಇನ್‌ಟೇಕ್) ಮತ್ತು ಶಿಕ್ಷಣದ ಗುಣಮಟ್ಟವನ್ನು ಶಾಸನಬದ್ಧ ಕಾಯ್ದೆ ಸಂಸ್ಥೆಗಳ ಅಡಿಯಲ್ಲಿ ಮೇಲ್ವಿಚಾರಣೆ ಮಾಡುವುದೇ ;

(ಆ) ಹಾಗಿದ್ದಲ್ಲಿ, ಮೇಲಿನ ಪ್ರತಿಯೊಂದು ಶಾಸನಬದ್ಧ ಕಾಯ್ದೆಗಳ ಸಂಸ್ಥೆಗಳ ಅಡಿಯಲ್ಲಿ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ ಅನುಮೋದಿಸಿದ ಸಂಸ್ಥೆಗಳ ಪಟ್ಟಿಯನ್ನು ಸಂಪೂರ್ಣ ಮಾಹಿತಿಯೊಂದಿಗೆ ನೀಡುವುದು ;

(ಇ) ಆ ಶಾಸನಬದ್ಧ ಕಾಯ್ದೆಗಳ ಸಂಸ್ಥೆ ಅಡಿಯಲ್ಲಿ ಅನುಮೋದನೆ ನೀಡಿರುವ ಖಾಸಗಿ ವಿಶ್ವವಿದ್ಯಾನಿಲಯಗಳ ಪಟ್ಟಿಯನ್ನು ನೀಡುವುದು ?

## ಶಿಥಿಲವಾಗಿರುವ ಸರ್ಕಾರಿ ಶಾಲೆಗಳ ಬಗ್ಗೆ

**ಶ್ರೀ ಆರ್. ಧರ್ಮಸೇನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೪೭ (೩೨೫) ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಅನೇಕ ಕಡೆಗಳಲ್ಲಿ ಶಿಥಿಲವಾದ ಹಾಗೂ ಅಪಾಯಕಾರಿ ಕಟ್ಟಡಗಳಲ್ಲಿ ಸರ್ಕಾರಿ ಶಾಲೆಗಳು ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಆ ರೀತಿ ಎಷ್ಟು ಶಾಲೆಗಳನ್ನು ಗುರುತಿಸಲಾಗಿದೆ ;

(ಆ) ಶಿಕ್ಷಕರು ಮತ್ತು ಮಕ್ಕಳು ಇಂತಹ ಶಾಲೆಗಳಲ್ಲಿ ಅಪಾಯಕಾರಿ ಪರಿಸ್ಥಿತಿಯಲ್ಲಿರುವುದರಿಂದ ಕೂಡಲೆ ದುರಸ್ತಿ ಕಾರ್ಯ ಕೈಗೊಳ್ಳಲು ಸರ್ಕಾರ ಕ್ರಮ ಕೈಗೊಳ್ಳುತ್ತದೆಯೇ ;

(ಇ) ಸಮರೋಪಾದಿಯಲ್ಲಿ ದುರಸ್ತಿ ಅಥವಾ ಹೊಸ ಕಟ್ಟಡ ನಿರ್ಮಾಣದ ಬಗ್ಗೆ ಸರ್ಕಾರ ಕಾರ್ಯಕ್ರಮ ರೂಪಿಸುತ್ತದೆಯೇ ; ಈ ದಿಸೆಯಲ್ಲಿ ಸರ್ಕಾರದ ನಿಲುವೇನು ?

## ಆರ್.ಟಿ.ಇ. ಅಡಿಯಲ್ಲಿ ಆಯ್ಕೆ ಮಾಡುವ ಮಾನದಂಡದ ಬಗ್ಗೆ

**ಶ್ರೀ ಕೆ.ಪಿ. ನಂಜುಂಡಿ ವಿಶ್ವಕರ್ಮ (ವಿಧಾನಸಭೆಯಿಂದ ಚುನಾಯಿತರಾದವರು) –**

೪೮ (೨೧೬) ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ೩ ವರ್ಷಗಳಲ್ಲಿ ಶಿಕ್ಷಣ ಹಕ್ಕು ಕಾಯಿದೆ ಅನುಷ್ಠಾನಕ್ಕಾಗಿ ಸರ್ಕಾರ ವೆಚ್ಚ ಮಾಡಿದ ಅನುದಾನವೆಷ್ಟು ; (ವರ್ಷಾವಾರು ವಿವರ ನೀಡುವುದು) ಆರ್.ಟಿ.ಇ. ಅಡಿ ಆಯ್ಕೆಯಾಗಲು ಇರುವ ಮಾನದಂಡಗಳೇನು ; (ಸರ್ಕಾರ ಇಲ್ಲಿಯವರೆಗೂ ಹೊರಡಿಸಿರುವ ಮಾರ್ಗಸೂಚಿಗಳ ಪ್ರತಿಯನ್ನು ಒದಗಿಸುವುದು)

(ಆ) ಮಾರ್ಗಸೂಚಿಯಲ್ಲಿನ ಕೆಲವು ತೊಡಕುಗಳಿಂದ ಹಾಗೂ ಕಠಿಣ ನಿಯಮಗಳಿಂದ ಬಡ ವಿದ್ಯಾರ್ಥಿಗಳು ಆರ್.ಟಿ.ಇ ಪ್ರವೇಶಾತಿಯಿಂದ ವಂಚಿತರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಕಳೆದ ಸಾಲಿನಲ್ಲಿ ಶಿಕ್ಷಣ ಹಕ್ಕು ಕಾಯ್ದೆಯಡಿ ಲಭ್ಯವಿದ್ದ ಸೀಟುಗಳ ಸಂಖ್ಯೆ ಎಷ್ಟು ; ದಾಖಲಾದ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು ವಿವರ ನೀಡುವುದು)

(ಈ) ಪ್ರಸಕ್ತ ಸಾಲಿನಲ್ಲಿ ಲಭ್ಯವಾದ ಸೀಟುಗಳ ಸಂಖ್ಯೆ ಎಷ್ಟು ; ಮೊದಲ ಮತ್ತು ದ್ವಿತೀಯ ಹಂತದ ಲಾಟರಿ ಮೂಲಕ ಆಯ್ಕೆ ಪ್ರಕ್ರಿಯೆಯಲ್ಲಿ ಆಯ್ಕೆಯಾದ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು ; ದಾಖಲಾತಿ ಪಡೆದ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು ವಿವರ ನೀಡುವುದು)

(ಉ) ಕೆಲವು ಖಾಸಗಿ ಶಾಲೆಗಳು ಪಠ್ಯಪುಸ್ತಕ, ನೋಟ್‌ಬುಕ್ ಮತ್ತು ಸಮವಸ್ತ್ರ ಹಾಗೂ ಇತರ ಕಾರಣ ನೀಡಿ ವಿದ್ಯಾರ್ಥಿಗಳಿಂದ ದುಬಾರಿ ಶುಲ್ಕ ವಸೂಲಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಈ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ ;

(ಊ) ಶಿಕ್ಷಣ ಹಕ್ಕು ಕಾಯಿದೆಯ ಸಮಗ್ರ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಮತ್ತು ಬಡ ವಿದ್ಯಾರ್ಥಿಗಳು ಮಾರ್ಗಸೂಚಿಯ ಗೊಂದಲದಿಂದ ಪ್ರವೇಶ ಪಡೆಯಲು ವಂಚಿತರಾಗುವುದನ್ನು ತಡೆಯಲು ಸರ್ಕಾರ ಯಾವ ರೀತಿ ಕ್ರಮ ಕೈಗೊಂಡಿದೆ ?

## ಖಾಸಗಿ ಶಾಲೆಗಳಲ್ಲಿ ಶಾಲಾ ಶುಲ್ಕ ಪಠ್ಯಪುಸ್ತಕ ಹಾಗೂ ಸಮವಸ್ತ್ರದ ಬಗ್ಗೆ

**ಶ್ರೀ ಪಿ.ಆರ್. ರಮೇಶ್ (ನಾಮನಿರ್ದೇಶನ ಹೊಂದಿದವರು)** –

೪೯ (೩೧೯) ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕರ್ನಾಟಕ ಶಿಕ್ಷಣ ಇಲಾಖೆಯವರು ಶಿಕ್ಷಣ ಕಾಯ್ದೆಯ ಪ್ರಕಾರ ರಾಜ್ಯದಲ್ಲಿರುವ ಎಲ್ಲಾ ರೀತಿಯ (ಸ್ಟೇಟ್, ಐ.ಸಿ.ಎಸ್.ಇ., ಸಿ.ಬಿ.ಎಸ್.ಇ.) ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ನಿಗದಿಪಡಿಸಬಹುದಾದ ಶುಲ್ಕದ ವಿವರಗಳನ್ನು ದಾಖಲಾತಿಗಳೊಂದಿಗೆ ನೀಡುವುದು ;

(ಆ) ಕರ್ನಾಟಕ ಶಿಕ್ಷಣ ಕಾಯ್ದೆಯ ಪ್ರಕಾರ ರಾಜ್ಯದಲ್ಲಿರುವ ಎಲ್ಲಾ ಪ್ರಕಾರದ (ಸ್ಟೇಟ್, ಐ.ಸಿ.ಎಸ್.ಇ, ಸಿ.ಬಿ.ಎಸ್.ಇ.) ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಹೆಚ್ಚು ಶುಲ್ಕ ನಿಗದಿಪಡಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ದಾಖಲಾತಿಗಳೊಂದಿಗೆ ಮಾಹಿತಿ ನೀಡುವುದು ;

(ಇ) ಬೆಂಗಳೂರು ನಗರದಲ್ಲಿರುವ ಬಿಷಪ್ ಕಾಟನ್ ಬಾಯ್ಸ್ ಶಾಲೆಯಲ್ಲಿ ಎಲ್.ಕೆ.ಜಿ. ತರಗತಿಗೆ ಶಾಲೆಯುವರು ೨೦೧೩-೧೪ ರಿಂದ ೨೦೧೮-೧೯ನೇ ಸಾಲಿನವರೆವಿಗೂ ನಿಗದಿಪಡಿಸಿರುವ ಒಟ್ಟು ಶುಲ್ಕವೆಷ್ಟು ;

(ಈ) ಬೆಂಗಳೂರು ನಗರದಲ್ಲಿರುವ ಬಾಲ್ಡ್‌ವಿನ್ ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್ಸ್ ಶಾಲೆಗಳ ಬಗ್ಗೆ ಪತ್ರಿಕೆ/ಟಿವಿ ಮಾಧ್ಯಮಗಳಲ್ಲಿ ಕಳೆದ ೨ ತಿಂಗಳಿನಿಂದ ಬಿತ್ತರಿಸುತ್ತಿದ್ದ ಬಗ್ಗೆ ಶಿಕ್ಷಣ ಇಲಾಖೆಯ ಅಧಿಕಾರಿಗಳು ತೆಗೆದುಕೊಂಡ ಕ್ರಮದ ಬಗ್ಗೆ ಸಂಬಂಧಿಸಿದ ದಾಖಲಾತಿಗಳೊಂದಿಗೆ ಮಾಹಿತಿಯನ್ನು ನೀಡುವುದು ;

(ಉ) ಬೆಂಗಳೂರು ನಗರದಲ್ಲಿರುವ ಬಾಲ್ಡ್‌ವಿನ್ಸ್ ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್ಸ್‌ರವರ ಎಲ್ಲಾ (ಬಾಲ್ಡ್‌ವಿನ್ ಬಾಯ್ಸ್ ಹೈಸ್ಕೂಲ್, ಬಾಲ್ಡ್‌ವಿನ್ ಗರ್ಲ್ಸ್ ಹೈಸ್ಕೂಲ್, ಬಾಲ್ಡ್‌ವಿನ್ ಕೋ ಎಜ್ಯುಕೇಷನ್ ಎಕ್ಸ್‌ಟೆನ್‌ಷನ್ ಹೈಸ್ಕೂಲ್) ಶಾಲೆಗಳಲ್ಲಿ ಎಲ್.ಕೆ.ಜಿ. ತರಗತಿಯಿಂದ ೧೦ನೇ ತರಗತಿಯವರೆವಿಗೂ ೨೦೧೩-೧೪ ರಿಂದ ೨೦೧೮-೧೯ನೇ ಸಾಲಿನವರೆವಿಗೂ ನಿಗದಿಪಡಿಸಿರುವ ಶಾಲಾ ಶುಲ್ಕವೆಷ್ಟು ; ಸಂಬಂಧಿಸಿದ ದಾಖಲಾತಿಗಳೊಂದಿಗೆ ಮಾಹಿತಿಯನ್ನು ನೀಡುವುದು ;

(ಊ) ಕರ್ನಾಟಕ ರಾಜ್ಯದಲ್ಲಿರುವ ಖಾಸಗಿ ಶಾಲೆಗಳಲ್ಲಿ ಪಠ್ಯಪುಸ್ತಕ ಹಾಗೂ ಸಮವಸ್ತ್ರಗಳನ್ನು ಮಾರಾಟ ಮಾಡಲು ಕಾಯ್ದೆಯಲ್ಲಿ ಅವಕಾಶ ಇದೆಯೇ ; (ಸಂಪೂರ್ಣವಾದ ಮಾಹಿತಿ ನೀಡುವುದು)

(ಎ) ಖಾಸಗಿ ಶಾಲೆಗಳಲ್ಲಿ ಪಠ್ಯಪುಸ್ತಕ ಹಾಗೂ ಸಮವಸ್ತ್ರಗಳನ್ನು ಮಾರಾಟ ಮಾಡುತ್ತಿದ್ದಲ್ಲಿ, ಅಂತಹ ಶಾಲೆಗಳ ವಿರುದ್ಧ ಕ್ರಮ ಕೈಗೊಳ್ಳಲಾಗಿದೆಯೇ ; ಕೈಗೊಂಡಿದ್ದಲ್ಲಿ, ಕೈಗೊಂಡ ಬಗೆಗಿನ ಮಾಹಿತಿ ನೀಡುವುದು ?

## ಶಿಕ್ಷಕರ/ಉಪನ್ಯಾಸಕರ ವರ್ಗಾವಣೆ ಬಗ್ಗೆ

**ಶ್ರೀಮತಿ ತಾರಾಅನೂರಾಧ (ನಾಮನಿರ್ದೇಶನ ಹೊಂದಿದವರು) –**

೫೦ (೨೭೬) ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಪ್ರಾಥಮಿಕ, ಪ್ರೌಢ ಮತ್ತು ಪದವಿ ಪೂರ್ವ ಶಾಲಾ ಕಾಲೇಜುಗಳ ಶಿಕ್ಷಕರ/ಉಪನ್ಯಾಸಕರ ವರ್ಗಾವಣೆಯ ಕಾರ್ಯವು ಪ್ರಸ್ತುತ ಯಾವ ಹಂತದಲ್ಲಿದೆ ;

(ಆ) ಪ್ರಸಕ್ತ ಸಾಲಿನಲ್ಲಿ ವರ್ಗಾವಣೆ ಪ್ರಕ್ರಿಯೆಯಲ್ಲಿ ಅಳವಡಿಸಿಕೊಂಡಿರುವ ನಿಯಮಗಳೇನು ;

(ಇ) ಯಾವ ಕಾರಣಕ್ಕಾಗಿ ವರ್ಗಾವಣೆ ಪ್ರಕ್ರಿಯೆಯು ವಿಳಂಬವಾಗಿದೆ ;

(ಈ) ಈಗಾಗಲೇ ಜಾರಿಗೆ ತಂದಿರುವ ಹೊಸ ನಿಯಮದಲ್ಲಿ ಯಾವ ಯಾವ ನಿಯಮಗಳನ್ನು ಸಡಿಲಗೊಳಿಸಲು ಸರ್ಕಾರ ನಿರ್ಧರಿಸಿದೆ ;

(ಉ) ಶಿಕ್ಷಕ/ಉಪನ್ಯಾಸಕರ ವರ್ಗಾವಣೆ ಪ್ರಕ್ರಿಯೆಯನ್ನು ಯಾವಾಗ ಪ್ರಾರಂಭ ಮಾಡಲು ಸರ್ಕಾರ ಚಿಂತಿಸಿದೆ ?

## ಪ್ರಥಮ ದರ್ಜೆ ಕಾಲೇಜುಗಳನ್ನು ತೆರೆಯುವ ಬಗ್ಗೆ

**ಶ್ರೀ ಎಂ.ಎ. ಗೋಪಾಲ ಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೫೧ (೩೦೪) ಉನ್ನತ ಶಿಕ್ಷಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಶ್ರವಣಬೆಳಗೊಳ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿರುವ ನುಗ್ಗೆಹಳ್ಳಿ ಮತ್ತು ಶ್ರವಣಬೆಳಗೊಳ ಹೋಬಳಿ ಕೇಂದ್ರಗಳಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಲ್ಲದೆ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳನ್ನು ಆರಂಭಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ;

(ಇ) ಕಾಲೇಜುಗಳನ್ನು ಪ್ರಸಕ್ತ ಸಾಲಿನಲ್ಲಿ ಮಂಜೂರು ಮಾಡಲಾಗುವುದೇ ; ಇಲ್ಲದಿದ್ದಲ್ಲಿ, ಕಾರಣಗಳೇನು ; ಈ ಕುರಿತು ಸರ್ಕಾರದ ನಿಲುವೇನು ? (ವಿವರ ನೀಡುವುದು)

## ಅನುದಾನಿತ ಶಾಲಾ ಶಿಕ್ಷಕರಿಗೆ / ಉಪನ್ಯಾಸಕರಿಗೆ ವೇತನ ತಡೆಹಿಡಿದಿರುವ ಬಗ್ಗೆ

**ಶ್ರೀ ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ) –**

೫೨ (೩೧೫) ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿನ ಖಾಸಗಿ ಅನುದಾನಿತ ಶಾಲೆಗಳಲ್ಲಿನ ಶಿಕ್ಷಕರಿಗೆ / ಉಪನ್ಯಾಸಕರಿಗೆ ಫಲಿತಾಂಶವನ್ನು ಮಾನದಂಡವನ್ನಾಗಿಸಿ, ಸಂಬಳವನ್ನು ತಡೆಹಿಡಿಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಇಂತಹ ನಿರ್ಧಾರದಿಂದ ಎಷ್ಟು ಶಾಲಾ ಕಾಲೇಜುಗಳ ಸಿಬ್ಬಂದಿಗೆ ತೊಂದರೆಯಾಗಿದೆ ;

(ಇ) ಇಂತಹ ಅವೈಜ್ಞಾನಿಕ ನಿರ್ಧಾರವನ್ನು ಸರ್ಕಾರ ಹಿಂಪಡೆಯುವುದೆ ? (ಸರ್ಕಾರದ ಆದೇಶದ ಪ್ರತಿಯನ್ನು ನೀಡುವುದು)

## ರಾಜ್ಯದ ವಿಶ್ವವಿದ್ಯಾನಿಲಯಗಳಲ್ಲಿ ವಿದ್ಯಾರ್ಥಿಗಳಿಗೆ ಏಕರೂಪ ಪಠ್ಯಕ್ರಮ ಜಾರಿಯ ಬಗ್ಗೆ

**ಶ್ರೀ ಆರ್. ಪ್ರಸನ್ನ ಕುಮಾರ್** (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –

೫೩ (೨೧೪) ಉನ್ನತ ಶಿಕ್ಷಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ವಿಶ್ವವಿದ್ಯಾನಿಲಯಗಳಲ್ಲಿ ವಿದ್ಯಾರ್ಥಿಗಳಿಗೆ ಏಕರೂಪ ಪಠ್ಯಕ್ರಮ ತರುವ ಉದ್ದೇಶವಿದೆಯೇ ; (ವಿವರ ನೀಡುವುದು)

(ಆ) ರಾಜ್ಯದ ಎಲ್ಲಾ ವಿಶ್ವವಿದ್ಯಾನಿಲಯಗಳಲ್ಲಿರುವ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಯ ವಿವರವನ್ನು ಒದಗಿಸುವುದು ;

(ಇ) ವಿಶ್ವವಿದ್ಯಾನಿಲಯಗಳಲ್ಲಿ ವಿದ್ಯಾರ್ಥಿಗಳು ಪಿಹೆಚ್‌ಡಿ ಮಾಡಲು ನಿಗದಿಪಡಿಸಿದ ವಿದ್ಯಾರ್ಹತೆ ಹಾಗೂ ಮಾನದಂಡಗಳೇನು ?

## ಜಲವಿದ್ಯುತ್ ಯೋಜನೆಗಳ ಬಗ್ಗೆ

**ಡಾ. ತೇಜಸ್ವಿನಿ ಗೌಡ (ವಿಧಾನಸಭೆಯಿಂದ ಚುನಾಯಿತರಾದವರು) –**

೫೪ (೩೪೫) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕರ್ನಾಟಕ ರಾಜ್ಯದಲ್ಲಿರುವ ಜಲವಿದ್ಯುತ್ (ಒಟ್ಟಾರೆ) ಯೋಜನೆಗಳ ಸಂಖ್ಯೆ ಎಷ್ಟು ; ಮತ್ತು ಎಲ್ಲೆಲ್ಲಿವೆ ;

(ಆ) ಸದರಿ ಯೋಜನೆಗಳಿಗೆ ಯಾವ ನದಿ ಮತ್ತು ಉಪನದಿಗಳನ್ನು ಆಶ್ರಯಿಸಲಾಗಿದೆ ; ಲಭ್ಯವಾಗುತ್ತಿರುವ–ಬಳಸಿಕೊಳ್ಳುತ್ತಿರುವ ನೀರಿನ ಪ್ರಮಾಣವೆಷ್ಟು ; ಉತ್ಪಾದಿತ ವಿದ್ಯುತ್ ಪ್ರಮಾಣವೆಷ್ಟು ;

(ಇ) ಈ ಯೋಜನೆಗಳನ್ನು ಸ್ಥಾಪಿಸಲು ಎಷ್ಟು ಪ್ರಮಾಣದ ಅರಣ್ಯ ಜಾಗವನ್ನು ಬಳಸಿಕೊಳ್ಳಲಾಗಿದೆ ; ನಾಶವಾದ ಅರಣ್ಯ ಸಂಪತ್ತೆಷ್ಟು ; ಪರಿಸರದ ರಕ್ಷಣೆ ಹಾಗೂ ಸಂರಕ್ಷಣೆ ಕಾಯ್ದುಕೊಳ್ಳಲು ಕೈಗೊಂಡ ಕ್ರಮಗಳೇನು ; (ಅಂಕಿ, ಸಂಖ್ಯೆ ಸಹಿತ ವಿವರ ನೀಡುವುದು)

(ಈ) ಈ ಯೋಜನೆಗಳ ಅನುಷ್ಠಾನದಿಂದಾಗಿ ನಿರಾಶ್ರಿತಗೊಂಡ ರೈತಾಪಿ, ಆದಿವಾಸಿ, ಬುಡಕಟ್ಟು, ಅರಣ್ಯವಾಸಿ, ಅಲೆಮಾರಿ ಜನ ಸಮೂಹದ ಪ್ರಮಾಣವೆಷ್ಟು ; ನಿರಾಶ್ರಿತಗೊಂಡವರಿಗೆ ಯಾವ್ಯಾವ ಪರ್ಯಾಯ ವ್ಯವಸ್ಥೆಗಳನ್ನು ಕೈಗೊಳ್ಳಲಾಗಿದೆ ? (ಅಂಕಿ ಸಂಖ್ಯೆ ಸಹಿತ ಸಮಗ್ರ ವಿವರ ನೀಡುವುದು)

## ಸಾರ್ವಜನಿಕ ನಿಗಮಗಳಲ್ಲಿ ಅನುಕಂಪದ ಹುದ್ದೆ ತುಂಬದಿರುವ ಬಗ್ಗೆ

**ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ (ಪದವೀಧರರ ಕ್ಷೇತ್ರ) –**

೫೫ (೩೪೭) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕರ್ನಾಟಕ ಸರ್ಕಾರದಲ್ಲಿರುವ ಆಡಳಿತ ಇಲಾಖೆಗಳ ಸಂಖ್ಯೆ ಎಷ್ಟು ; ಅವು ಯಾವುವು ; (ವಿವರವಾದ ಮಾಹಿತಿ ನೀಡುವುದು)

(ಆ) ಸದರಿ ಇಲಾಖೆಗಳ ಅಧೀನದಲ್ಲಿ ಬರುವ ಸಾರ್ವಜನಿಕ ನಿಗಮಗಳು/ ಕಂಪನಿಗಳು ಶಾಸನಬದ್ಧ ಮಂಡಳಿಗಳು, ಉದ್ದಿಮೆಗಳು, ಅಂಗ ಸಂಸ್ಥೆಗಳು, ಸೊಸೈಟಿಗಳ ಸಂಖ್ಯೆ ಎಷ್ಟು ; ಅವು ಯಾವುವು ; (ವಿವರವಾಗಿ ಇಲಾಖಾವಾರು, ಕೇಂದ್ರ ಕಚೇರಿ, ವಿಳಾಸ ಹಾಗೂ ದೂರವಾಣಿ ಸಂಖ್ಯೆಗಳನ್ನು ಒಳಗೊಂಡಂತೆ ವಿವರವಾದ ಮಾಹಿತಿ ನೀಡುವುದು ;

(ಇ) ಸದರಿ ನಿಗಮ/ಮಂಡಳಿಗಳು ಅನುಕಂಪ ಆಧಾರಿತ ಹುದ್ದೆಗಳನ್ನು ೨೦೦೦ನೇ ಇಸವಿಯಿಂದ ಭರ್ತಿ ಮಾಡಿಕೊಳ್ಳದಿರಲು ಕಾರಣಗಳೇನು ; (ವಿವರವಾದ ಮಾಹಿತಿ ನೀಡುವುದು)

(ಈ) ಹಾಲಿ ಸದರಿ ನಿಗಮ/ಮಂಡಳಿಗಳಲ್ಲಿ, ಅರ್ಜಿ ಸಲ್ಲಿಸಿ, ಬಾಕಿ ಇರುವ ಅನುಕಂಪ ಆಧಾರಿತ ಹುದ್ದೆಗಳ ಕೋರಿಕೆಗಳು ಎಷ್ಟು ; (ವಿವರವಾಗಿ ಹೆಸರು, ವಿಳಾಸ, ಅರ್ಜಿ ಸಲ್ಲಿಸಿರುವ ದಿನಾಂಕದೊಂದಿಗೆ ಮಾಹಿತಿ ನೀಡುವುದು)

(ಉ) ಬಾಕಿ ಇರುವ ಅನುಕಂಪ ಆಧಾರಿತ ಅರ್ಜಿಗಳನ್ನು ಸರ್ಕಾರವು ಯಾವ ಕಾಲಮಿತಿಯೊಳಗೆ ಇತ್ಯರ್ಥಗೊಳಿಸುವುದು ?

## KREDL ನಲ್ಲಿ ಗುತ್ತಿಗೆ ನೌಕರರ ನೇಮಕಾತಿ ಬಗ್ಗೆ

**ಶ್ರೀ ಟಿ.ಎ. ಶರವಣ (ವಿಧಾನಸಭೆಯಿದ ಚುನಾಯಿತರಾದವರು) –**

**ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ (ಪದವೀಧರರ ಕ್ಷೇತ್ರ) –**

೫೬ (೩೪೦+೩೪೦ಎ) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಗಮ ನಿಯಮಿತ (KREDL) ಸಂಸ್ಥೆಯಲ್ಲಿ ಗುತ್ತಿಗೆ ಆಧಾರದ ಮೇಲೆ ಕೆಲಸ ನಿರ್ವಹಿಸುತ್ತಿದ್ದ ೪೮ ಜನರ ಪೈಕಿ ಎಷ್ಟು ಜನರನ್ನು ಯಾವ ದಿನಾಂಕದಂದು ಕಂಪನಿ

ಸೇವೆಯಲ್ಲಿ ವಿಲೀನಗೊಳಿಸಲಾಯಿತು ; (ಹೆಸರು, ಹುದ್ದೆಯ ಪದನಾಮ, ವಿದ್ಯಾರ್ಹತೆ, ವೇತನ ಶ್ರೇಣಿ ಹಾಗೂ ಇವರು ಮಾಸಿಕ ಪಡೆಯುತ್ತಿರುವ ವೇತನದ ಸಹಿತ ಮಾಹಿತಿ ನೀಡುವುದು)

(ಆ) ಎಷ್ಟು ಜನರನ್ನು ಖಾಯಂ ಪ್ರಕ್ರಿಯೆಯಿಂದ ಕೈಬಿಡಲಾಯಿತು ; (ಹೆಸರು, ಹುದ್ದೆಯ ಪದನಾಮ, ವಿದ್ಯಾರ್ಹತೆ, ವೇತನ ಶ್ರೇಣಿ ಹಾಗೂ ಇವರು ಮಾಸಿಕ ಪಡೆಯುತ್ತಿರುವ ವೇತನಗಳ ಮಾಹಿತಿ ನೀಡುವುದು)

(ಇ) ಇವರನ್ನು ಖಾಯಂ ಮಾಡುವಂತೆ ಮಾನ್ಯ ಉಚ್ಚ ನ್ಯಾಯಾಲಯವು ಆದೇಶ ಮಾಡಿದ್ದು ಇದರ ಸಂಬಂಧ ಕಾನೂನು ಇಲಾಖೆಯು ಇವರನ್ನು ಅವರಿಗೆ ಸರಿಸಮಾನಾಗಿ ವಿಲೀನಗೊಳಿಸುವಂತೆ ಅಭಿಪ್ರಾಯ ನೀಡಿದ್ದು ಈ ಅಭಿಪ್ರಾಯಕ್ಕೆ ಸರ್ಕಾರ ಅನುಮೋದನೆ ನೀಡಿದ್ದರೂ ಕೂಡ ಅಧಿಕಾರಿಗಳು ಇವರನ್ನು ಖಾಯಂ ಮಾಡದಿರಲು ಕಾರಣಗಳೇನು ;

(ಈ) ಕಳೆದ ೧೨ ವರ್ಷಗಳಿಂದ ಹೋರಾಟ ನಡೆಸುತ್ತಿರುವ ನೊಂದ ಈ ಅಭ್ಯರ್ಥಿಗಳನ್ನು ಸರ್ಕಾರವು ಯಾವ ಕಾಲಮಿತಿಯೊಳಗೆ KREDL ಸಂಸ್ಥೆಯಲ್ಲಿ ವಿಲೀನಗೊಳಿಸಿ ಆದೇಶ ಹೊರಡಿಸಿ ನ್ಯಾಯ ಒದಗಿಸುವುದು ?

## ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಮಂಜೂರಾದ ಹುದ್ದೆಗಳ ಕುರಿತು

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

**೫೭** (೨೮೯) ಉನ್ನತ ಶಿಕ್ಷಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಸಂಖ್ಯೆ ಎಷ್ಟು ; ಅವುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಗ್ರೇಡ್–೧ ಪ್ರಾಂಶುಪಾಲರುಗಳ ಸಂಖ್ಯೆ ಎಷ್ಟು ; ಕೊರತೆ ಇರುವ ಗ್ರೇಡ್–೧ ಪ್ರಾಂಶುಪಾಲರುಗಳ ಸಂಖ್ಯೆ ಎಷ್ಟು ; ಈ ಕೊರತೆಯನ್ನು ತುಂಬಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ; ಇಲ್ಲವಾದಲ್ಲಿ, ಕಾರಣವೇನು ; (ಜಿಲ್ಲಾವಾರು ವಿವರ ನೀಡುವುದು)

(ಆ) ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಮಂಜೂರಾದ ಬೋಧಕ ಮತ್ತು ಬೋಧಕೇತರ ಹುದ್ದೆಗಳ ಸಂಖ್ಯೆ ಎಷ್ಟು ; ಕೊರತೆ ಇರುವ ಹುದ್ದೆಗಳ ಸಂಖ್ಯೆ ಎಷ್ಟು ; ಈ ಕೊರತೆಯನ್ನು ತುಂಬಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ; ಇಲ್ಲವಾದಲ್ಲಿ ಕಾರಣವೇನು ;

(ಇ) ಉಡುಪಿ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳು ಯಾವುವು ; ಅವುಗಳಿಗೆ ಮಂಜೂರಾದ ಬೋಧಕ ಮತ್ತು ಬೋಧಕೇತರ ಹುದ್ದೆಗಳ ಸಂಖ್ಯೆ ಎಷ್ಟು ; ಕೊರತೆ ಇರುವ ಹುದ್ದೆಗಳ ಸಂಖ್ಯೆ ಎಷ್ಟು ; ಈ ಕೊರತೆಯನ್ನು ತುಂಬಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ? (ತಾಲ್ಲೂಕುವಾರು, ಕಾಲೇಜುವಾರು ವಿವರ ನೀಡುವುದು)

## ಪದವಿಪೂರ್ವ ವೃತ್ತಿ ಶಿಕ್ಷಣ (ಜೆ.ಓ.ಸಿ.) ಸಿಬ್ಬಂದಿಗಳ ಪಿಂಚಣಿ ಸೌಲಭ್ಯದ ಬಗ್ಗೆ

**ಶ್ರೀ ಭೋಜೇಗೌಡ (ಶಿಕ್ಷಕರ ಕ್ಷೇತ್ರ) –**

೫೮ (೨೮೩) ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಪದವಿ ಪೂರ್ವ ವೃತ್ತಿ ಶಿಕ್ಷಣ (ಜೆ.ಓ.ಸಿ.) ಇಲಾಖೆಯ ೨೯ ಕೋರ್ಸ್‌ಗಳನ್ನು ರದ್ದುಪಡಿಸಲಾಗಿದ್ದು ಯಾವಾಗ ;

(ಆ) ಈ ಇಲಾಖೆಯಲ್ಲಿ ಕೆಲಸ ನಿರ್ವಹಿಸುತ್ತಿದ್ದ ಅರೆಕಾಲಿಕ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳ ಸಂಖ್ಯೆ ಎಷ್ಟು ; ಸರ್ಕಾರ ಇವರನ್ನು ಯಾವಾಗ ವಿವಿಧ ಇಲಾಖೆಯಲ್ಲಿ ವಿಲೀನಗೊಳಿಸಿದೆ ;

(ಇ) ಹೀಗೆ ವಿಲೀನಗೊಂಡ ಜೆ.ಓ.ಸಿ. ಸಿಬ್ಬಂದಿಗಳಿಗೆ ಪಿಂಚಣಿಗೆ ವಿಲೀನ ಪೂರ್ವ ಸೇವೆಯನ್ನು ಪರಿಗಣಿಸದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಬಂದಿದ್ದಲ್ಲಿ, ಈ ಸಿಬ್ಬಂದಿಗಳ ಖಾಯಂಮಾತಿಗೂ ಹಿಂದಿನ (ಅರೆಕಾಲಿಕ ಸೇವೆ) ಸೇವೆಯನ್ನು ಪರಿಗಣಿಸಿ ಪಿಂಚಣಿ ಸೌಲಭ್ಯ ನೀಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

## ರಾಜ್ಯದ ಅನುದಾನಿತ ಶಿಕ್ಷಣ ಸಂಸ್ಥೆಗಳ ನೌಕರರಿಗೆ ನೂತನ ಪಿಂಚಣಿ ಯೋಜನೆ (NPS) ಜಾರಿಗೊಳಿಸುವ ಕುರಿತು

**ಶ್ರೀ ಎಸ್.ವ್ಹಿ. ಸಂಕನೂರ (ಪದವೀಧರರ ಕ್ಷೇತ್ರ) –**

೫೯ (೩೪೩) ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ೨೦೦೬ರ ನಂತರ ನೇಮಕಗೊಂಡ ರಾಜ್ಯ ಸರ್ಕಾರಿ ನೌಕರರಿಗೆ ಜಾರಿ ಮಾಡಿದ ನೂತನ ಪಿಂಚಣಿ ಯೋಜನೆಯನ್ನು (NPS) ರಾಜ್ಯದ ಖಾಸಗಿ ಅನುದಾನಿತ ಶಿಕ್ಷಣ ಸಂಸ್ಥೆಗಳ ಸಿಬ್ಬಂದಿಗೂ ಜಾರಿ ಮಾಡುವಲ್ಲಿ ಇರುವ ತೊಂದರೆಗಳೇನು ;

(ಆ) ದೇಶದ ಇತರೇ ರಾಜ್ಯಗಳಲ್ಲಿ ಖಾಸಗಿ ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ಸಿಬ್ಬಂದಿಗೆ ಆಯಾ ರಾಜ್ಯದವರು NPS ಜಾರಿ ಮಾಢಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ರಾಜ್ಯ ಖಾಸಗಿ ಅನುದಾನಿತ ಪ್ರಾಥಮಿಕ, ಪ್ರೌಢ ಪದವಿ ಪೂರ್ವ ಹಾಗೂ ಪದವಿ ಕಾಲೇಜು ಪಾಲಿಟೆಕ್ನಿಕ್ ಕಾಲೇಜುಗಳಲ್ಲಿ ೨೦೦೬ರ ನಂತರ ಎಷ್ಟು ಜನ ಸಿಬ್ಬಂದಿ ನೇಮಕಗೊಂಡು ಕಾರ್ಯ ನಿರ್ವಹಿಸುತ್ತಿರುವರು ಎಂಬುದರ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಲಾಗಿದೆಯೇ ; ಹಾಗಿದ್ದಲ್ಲಿ, ವಿವರ ನೀಡುವುದು ; ಈ ಸಿಬ್ಬಂದಿಗೆ NPS ಜಾರಿ ಮಾಡಿದ್ದಲ್ಲಿ ಸರ್ಕಾರದ ಮೇಲೆ ಎಷ್ಟು ಆರ್ಥಿಕ ಹೊರೆ ಬೀಳಲಿದೆ ಎಂಬುದರ ಬಗ್ಗೆ ಅಂದಾಜು ಮಾಡಲಾಗಿದೆಯೇ ? (ಮಾಹಿತಿ ನೀಡುವುದು)

## ಹೊಸ ಕಾಲೇಜುಗಳ ಅನುಮತಿಯಲ್ಲಿ ಉಂಟಾಗಿರುವ ಗೊಂದಲದ ಬಗ್ಗೆ

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ) –**

೬೦ (೨೬೮) ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಹೊಸ ಖಾಸಗಿ ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸಲು ಇರುವ ನಿಯಮಗಳೇನು ;

(ಆ) ಹೊಸ ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸಲು ಅನುಮತಿ ನೀಡುವ ಅಧಿಕಾರ ಯಾರಿಗೆ ಇದೆ ; ಈ ನಿಟ್ಟಿನಲ್ಲಿ ಕಳೆದ ೧೦ ವರ್ಷದಲ್ಲಿ ಸರ್ಕಾರ ಹೊರಡಿಸಿರುವ ಪ್ರತಿಯೊಂದು ಸುತ್ತೋಲೆಗಳ ಪ್ರತಿ ನೀಡುವುದು ; (ನಿಯಮಾವಳಿಗಳು ಹಾಗೂ ಹಳೆ ನಿಯಮಾವಳಿಗಳ ಸಂಪೂರ್ಣ ವಿವರ ನೀಡುವುದು)

(ಇ) ಶಿಕ್ಷಣ ಇಲಾಖೆಯ ಸಚಿವಾಲಯದಲ್ಲಿ ದಿನಾಂಕ: ೦೧.೦೨.೨೦೧೮ ರಿಂದ ೧೫.೦೬.೨೦೧೮ರವರೆಗಿನ ಅವಧಿಯಲ್ಲಿ ಅನುಮತಿ ನೀಡುರುವ ಪ್ರತಿ ಕಾಲೇಜಿನ ಹೆಸರು, ವಿವರ ಆ ಕಾಲೇಜುಗಳ ಅನುಮತಿಯ ಕುರಿತು ಉಪನಿರ್ದೇಶಕರ ಕಛೇರಿಯಿಂದ ಇಲಾಖೆಯ ಸಚಿವಾಲಯದವರೆಗೂ ದಾಖಲಿಸಿರುವ ಪ್ರತಿ ದಾಖಲೆಗಳು, ಟಿಪ್ಪಣಿಗಳನ್ನು ನೀಡುವುದು ;

(ಈ) ಪದವಿ ಪೂರ್ವ ಶಿಕ್ಷಣ ಮಂಡಳಿಯ ನಿರ್ದೇಶಕರಿಂದ ಅನುಮತಿ ನೀಡಲು ಪುರಸ್ಕೃತಗೊಂಡು ಬಂದಿರುವ ಕಡತಗಳ ಸಂಖ್ಯೆ ಎಷ್ಟು ಮತ್ತು ಯಾವುವು ; ಹಾಗೂ ತಿರಸ್ಕೃತಗೊಂಡು ಬಂದಿರುವ ಕಡತಗಳ ಸಂಖ್ಯೆ ಎಷ್ಟು ಮತ್ತು ಯಾವುವು ; ಅವುಗಳಲ್ಲಿ ಸರ್ಕಾರದ ಹಂತದಲ್ಲಿ ಅನುಮತಿ/ಆದೇಶ ಹೊರಡಿಸಿರುವ ಕಡತಗಳ ಸಂಖ್ಯೆ ಎಷ್ಟು ಮತ್ತು ಯಾವುವು ? (ಪ್ರತಿಯೊಂದು ಪ್ರಸ್ತಾವನೆಯ ಸಂಪೂರ್ಣ ವಿವರ ನೀಡುವುದು)

**ಕೆ.ಆರ್. ಮಹಾಲಕ್ಷ್ಮಿ**
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

ಸರ್ಕಾರಿ ಮುದ್ರಣಾಲಯ, ವಿಕಾಸಸೌಧ ಘಟಕ, ಬೆಂಗಳೂರು, ಕಾ.ಸೂ. 299 / ಪಿ5